
# ಮಮತೆ

■ ಸು. ನಾಗರಾಜ್
ಕಲೆ: ಭಾವು ಪತ್ತಾರ್



ಖಾಲಿ ಇದೆಯೆಂದು ತಿಳಿಯದೇ ಧಾವಿಸಿ ಬಂದು ಬಸ್ಸು ಹತ್ತಿದ ಆ ಜೀನ್ಸ್‌ಧಾರಿ ಯುವ ದಂಪತಿಗೆ ಒಳಗೆ ಬಂದಾಗ ಸಮಾಧಾನದ ನಿಟ್ಟುಸಿರು. ತಮ್ಮಲ್ಲೇ ಮಾತಾಡಿಕೊಂಡು ಎರಡು ಸೀಟುಗಳ ಸಾಲಿನಲ್ಲಿ ಬಸ್ಸಿನ ಮಧ್ಯದಲ್ಲಿ ಕುಳಿತವರ ಮಡಿಲಲ್ಲಿದ್ದ ಮಗು ಗಾಢ ನಿದ್ದೆಯಲ್ಲಿತ್ತು. ಬಾಯಲ್ಲಿ ನಿಪ್ಪಲ್ಲು.

ಕೆಲವೇ ನಿಮಿಷಗಳಲ್ಲಿ ಗಲಗಲ ಮಾತಾಡಿಕೊಂಡು 15–16 ಮಹಿಳೆಯರು ಬಸ್ಸಿನ ಒಳಹೊಕ್ಕರು. ಹಲವರ ಕೈಲಿ ಎಳೆಮಕ್ಕಳು, ಕೆಲವರ ಕೈ ಹಿಡಿದು ಓಡಿ ಬಂದ ಕಿಶೋರ/ಕಿಶೋರಿಯರು. ಉಟ್ಟ ವಸ್ತ್ರಗಳೇ ತೋರುತ್ತಿತ್ತು, ಅವರೆಲ್ಲ ಕೂಲಿ ಅರಿಸಿ ಬೆಂಗಳೂರಿಗೆ ಹೊರಟವರೆಂದು. ಜೊತೆಯಲ್ಲಿ ಬಂದ ಮಧ್ಯವಯಸ್ಕ ಮುಖಂಡ ಅವರಿಗೆಲ್ಲ ಸೀಟು ಮಾಡಿಕೊಡುತ್ತಿದ್ದ. ಕಂಡಕ್ಟರ್ ಬಳಿ ಚೌಕಾಸಿ–ವಾಗ್ಯುದ್ಧ–ಅರ್ಧ ಟಿಕೇಟಿನ ಮಕ್ಕಳಿಗೆ ಮುಫತ್ತಾಗಿ ಕರೆದೊಯ್ಯಲು ದುಂಬಾಲು. ಕಡೆಗೆ ಕಂಡಕ್ಟರನೇ ಸೋತು ಇವರು ಕೊಟ್ಟ ಹಣಕ್ಕೆ ಟಿಕೇಟು ಕೊಟ್ಟ. ‘‘ಇನ್ನು ಊರು ಮುಟ್ಟೋಗಂಟ ಈ ಬಸ್ಸೊಂದು ಸಂತೆ’’, ಮಣಮಣ ಗೊಣಗಿ ಜೀನ್ಸ್‌ಧಾರಿ ದಂಪತಿಗಳ ಕಡೆಗೆ ನೋಟ ತೂರಿದ. ಆ ಮುಖಗಳಲ್ಲೂ ಅದೇ ಅಸಹನೆ, ಸಿಂಡರಿಕೆ... ‘‘ಎಂಥಾ ಜನದ ಮಧ್ಯೆ ಸಿಕ್ಕಿಕೊಂಡೆವಲ್ಲ!’’ ಎಂಬ ಭಾವ.

ಬಸ್ಸು ಹೊರಟಿತು. ಕೂಲಿ ಹೆಂಗಸರ ಸಂಚಿಯಿಂದ ಹೊಗೆಸೊಪ್ಪು ಹರಿದವೀಳ್ಯ ಹೊರಬಂತು. ಮಕ್ಕಳ ಕೈಗೆ ಅಗ್ಗದ ಆಟಿಕೆ, ಚಿಕ್ಕಿ, ಪಾರ್ಲೆ ಬಿಸ್ಕತ್ತು ಸರಬರಾಜಾಯ್ತು. ಕೆಲವು ಹೆಂಗಸರ ಮಡಿಲಲ್ಲಿದ್ದ ಎಳೆ ಕೂಸುಗಳು ಮುಸುಮುಸು ಅಳು ಶುರುಮಾಡಿದವು.

ಜೀನ್ಸ್‌ಧಾರಿ ಯುವಕ ಮಡದಿಯ ಕಿವಿಯಲ್ಲಿ ನುಡಿದ, ‘‘ಇವುಗಳ ಅಳು ಕೇಳಿ ನಮ್ಮ ಪಾಪುನೂ ಎದ್ದು ಬಿಡತ್ತೆ.’’ ಅವಳೆಂದಳು, ‘‘ಪರವಾಗಿಲ್ಲ ಬಿಡುಮ ಬಾಟ್ಲಲ್ಲಿ ಹಾಲಿದೆ... ಕುಡಿಸಿದರಾಯ್ತು.’’

ಅಳುತ್ತಿದ್ದ ಕೂಲಿ ಹೆಂಗಸರ ಮಕ್ಕಳು ತಾಯಿಯರ ಎದೆ ಸೆರಗಿನಲ್ಲಿ ಮರೆಯಾದವು. ಕ್ರಮೇಣ ಅಳುವಿನ ದನಿ ಕಡಿಮೆಯಾಯಿತು. ಬಸ್ಸು ಒಂದೇ ವೇಗದಲ್ಲಿ ಬೆಂಗಳೂರಿಗೆ ಓಡುತ್ತಿತ್ತು.

ಜೀನ್ಸ್‌ಧಾರಿಗಳ ಮಗು ನಿದ್ದೆಯಿಂದ ಎದ್ದು ಅತ್ತಿತ್ತ ನೋಡಿ ಗಲಿಬಲಿಗೊಂಡು ಅಳುಮುಖ ಮಾಡಿತು. ತೊಡೆಯಿಂದ ಅದನ್ನೆತ್ತಿಕೊಂಡು ಆಕೆ ಅದಕ್ಕೆ ತನ್ನ ನಗುಮುಖ ತೋರಿದಳು. ಅಮ್ಮನ ಮುಖ ನೋಡಿ ಅದಕ್ಕೆ ತೃಪ್ತಿ , ಕೇಕೆನಗು. ತನ್ನ ಪುಟ್ಟ ಕೈಗಳಿಂದ ಅವಳ ಮುಖವನ್ನೆಲ್ಲ ಹಿಂಡಿತು... ತಲೆ ಕೂದಲು ಜಗ್ಗಿತು. ಕಟ್ಟಿದ ಹೇರ್‌ಪಿನ್ ಜಾರಿ ಅವಳ ಮುಖದ